ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 82-91
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಂಬೇಡ್ಕರ್ ಚಿಂತನೆಯಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ವಿನಾಶ

**ಮಲ್ಲೇಶಪ್ಪ ಟಿ. ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು

**Abstract:**
*ಭಾರತದ ಇತಿಹಾಸದ ಸಾಮಾಜಿಕ ರಂಗದಲ್ಲಿ ಕಾಣಬಹುದಾದ ಜಾತಿ ವ್ಯವಸ್ಥೆಯ ಉಗಮ, ಬೆಳವಣಿಗೆ ಅದರ ವಿವಿಧ ರೂಪವೇಷಗಳು, ಗುಣದೋಷಗಳು ಮತ್ತು ಜಾತಿಯೆಂಬ ವಿಷಯದ ವಿನಾಶ ಕುರಿತ ಅಧ್ಯಯನ ಬಹುರೋಚಕ, ವಿಸ್ಮಯ, ಭೀಭತ್ಸಗಳಿಂದ ಕೂಡಿದೆ. ಜಾತಿ, ಧರ್ಮ, ವರ್ಗ, ಪಂಥ ಭೇದಗಳನ್ನು ಕುರಿತು ಬಹಳಷ್ಟು ಅಧ್ಯಯನಗಳು ನಡೆದಿವೆಯಾದರೂ ವಸ್ತುನಿಷ್ಠವಾಗಿ ಪರಿಚಯಿಸುವ ಪ್ರಯತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರಿಂದ ಸಾಧ್ಯವಾಗಿದೆ. ಭಾರತದ ಶ್ರೇಷ್ಠ ಮಾನವತಾವಾದಿ, ಪ್ರಜಾತಂತ್ರ ಪರಚಿಂತಕ, ಸಮ ಸಮಾಜ ನಿರ್ಮಿಸಲು ತೊಡಕಾಗಿದಂತಹ ಜಾತಿ ವ್ಯವಸ್ಥೆ ನಿರ್ನಾಮ ಮಾಡಲು ಅವಶ್ಯಕ ಮಾರ್ಗ ಸೂಚಿಗಳನ್ನು, ಸವಾಲುಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ತಿಳಿಸಿದ್ದಾರೆ. ಮಾನವ ಗೌರವಯುತವಾಗಿ ಜೀವನ ನಡೆಸಲು, ಸಮಾಜದಲ್ಲಿನ ತಾರತಮ್ಯ ತೊಲಗಿಸಲು, ಸಾಮಾಜಿಕ ಕ್ರಾಂತಿಗೆ ಕಾನೂನಿನ ಚೌಕಟ್ಟಿನ ಮೂಲಕ ವಾಸ್ತವ ಮುನ್ನುಡಿ ಬರೆದವರೆ ಅಂಬೇಡ್ಕರ್. ಜಾತಿ ವಿನಾಶವಾಗದೆ ಸಮಾನತೆಯ ಸಮಾಜ ಸ್ಥಾಪನೆ ಅಸಾಧ್ಯ ಎಂದು ನಂಬಿದ್ದ ಅಂಬೇಡ್ಕರ್ ಅವರು ತಳ ಸಮುದಾಯದವರನ್ನು ಮೇಲಸ್ಥರದಲ್ಲಿನ ಸಮುದಾಯದ ಹಂತಕ್ಕೆ ಕೊಂಡೊಯ್ಯಲು ನಿರಂತರ ಅಧ್ಯಯನ, ಹೋರಾಟ, ಸಮಸ್ಯೆಗಳನ್ನು ಪರಿಹರಿಸಲು ತಮ್ಮದೇ ವಿಚಾರ ಸಹಿತ ಸಿದ್ಧಾಂತಗಳನ್ನು ಪ್ರತಿಪಾದಿಸಿದರು.*

**Keywords:** *ಭಾರತೀಯ ಸಮಾಜ, ವರ್ಣವ್ಯವಸ್ಥೆ, ಜಾತಿ ವ್ಯವಸ್ಥೆ, ಅಂಬೇಡ್ಕರ್ ಚಿಂತನೆ, ಜಾತಿ ವ್ಯವಸ್ಥೆ ವಿನಾಶ.*

**ಪೀಠಿಕೆ**

ಮಾನವೀಯ ಮೌಲ್ಯಗಳ ಸಹಿತ ಸಮಾಜ ಕಟ್ಟಲು ಬಹುದೊಡ್ಡ ಸವಾಲು ಎದುರಾಗಿದೆ ಎಂದರೆ ದೇಶದ ಜನರು ವೈಜ್ಞಾನಿಕ, ವೈಚಾರಿಕ ಚಿಂತನೆಗೆ ಬದಲಾಗಿ ವೇದ, ಶಾಸ್ತ್ರ ಪುರಾಣಗಳನ್ನು ಅಪ್ಪಿಕೊಂಡಿರುವುದು ಪ್ರಮುಖ ಕಾರಣವಾಗಿದೆ ಎಂಬ ಅಭಿಮತ ವ್ಯಕ್ತಪಡಿಸಿದರು. ಸಾಮಾಜಿಕ ಸ್ವಾತಂತ್ರ್ಯ ದೊರೆಯದ ತನಕ ರಾಜಕೀಯ, ಆರ್ಥಿಕ, ಧಾರ್ಮಿಕ ಸ್ವಾತಂತ್ರ್ಯಗಳು ಅರ್ಥಹೀನ ಮತ್ತು ಸ್ವಾರಸ್ಯ ರಹಿತ ಬದುಕು ಎಂಬುದು ಅಂಬೇಡ್ಕರ್ ಅವರ ಅಭಿಮತವಾಗಿದೆ. ಸಮಾಜದಲ್ಲಿನ ಜಾತೀಯತೆಯ ಅಂಧಕಾರದಿಂದ ವಿಮುಕ್ತರಾಗದೆ ವಿದೇಶಿಗರನ್ನು ಹೊರಹಾಕಿ ಗಳಿಸುವ ಸ್ವಾತಂತ್ರ್ಯ ಪರಿಪೂರ್ಣ ವಾಗುವುದಿಲ್ಲ ಬದಲಾಗಿ ಶೋಷಿತರನ್ನು ದೇಶದ ಉನ್ನತ ವರ್ಗಗಳ ಉಳಿಗಮಾನ್ಯದಾರರಿಗೆ ಮತ್ತಷ್ಟು ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮತ್ತು ಕೆಳ ಸಮುದಾಯದವರನ್ನು ದಮನ ಮಾಡಿ ಸವಾರಿಮಾಡಲು ಎಡೆ ಮಾಡಿಕೊಡುತ್ತದೆ ಎಂದು ಘೋಷಣೆ ಮಾಡಿರುತ್ತಾರೆ.

***Please cite this article as:*** ಮಲ್ಲೇಶಪ್ಪ ಟಿ.ಎಸ್. (2024). ಅಂಬೇಡ್ಕರ್ ಚಿಂತನೆಯಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ವಿನಾಶ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(5), 82–91

ಭಾರತದಲ್ಲಿ ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಾದ ಸ್ವಾತಂತ್ರ್ಯ ಸಮಾನತೆ, ಸಹೋದರತೆಗಳು ದೀರ್ಘಾವಧಿಯಲ್ಲಿ ಅರ್ಥಪೂರ್ಣವಾಗಿ ಕಾರ್ಯ ರೂಪದಲ್ಲಿ ಅನುಭವಿಸಬೇಕಾದರೆ ಜಾತಿ ವಿನಾಶವಾಗಲೇಬೇಕು. ಸ್ವಂತಿಕೆಯ ಅನುಭವದ ವಿಚಾರಗಳನ್ನು ಮುಕ್ತವಾಗಿ ಅಂದರೆ ಎಲ್ಲಾ ವರ್ಗಗಳ ಹಿತ ದೃಷ್ಟಿಯಿಂದ ವ್ಯಕ್ತಪಡಿಸಲು ಮತ್ತು ದೇಶದ ಸಂಪತ್ತನ್ನು ಸಮಾನವಾಗಿ ಹಂಚಿಕೆ ಮಾಡುವಲ್ಲಿ ಹಾಗೂ ಭರತ ಖಂಡದ ಎಲ್ಲರೂ ಒಂದು ದೇಶದ ಮಕ್ಕಳು, ಸಹೋದರರು ಎಂಬ ಭ್ರಾತೃತ್ವ ಭಾವನೆ ಅಳಕಿಲ್ಲದೆ ದೃಢವಾಗಿ ಅರಳಲು, ಭಾರತೀಯ ಸಮಾಜದಲ್ಲಿನ ಹಾಗೂ ಪರಂಪರೆಯಿಂದ ವಿಚಾರ ರಹಿತರಾಗಿ ರೂಢಿಸಿಕೊಂಡಿರುವ ಜಾತಿ ವ್ಯವಸ್ಥೆ ಯಾವೊಂದು ಅವಕಾಶವನ್ನು ಮಾಡಿಕೊಟ್ಟಿಲ್ಲ. ಜಾತಿಯೆಂಬ ಬೃಹತ್ ಪರ್ವತವನ್ನು ಮೆಟ್ಟಿ ಜಾತ್ಯತೀತ ನೆಲಗಟ್ಟಿನಲ್ಲಿ ಸಮರ್ಥ ನಾಗರಿಕ ಸಮಾಜವನ್ನು ಕಟ್ಟುವುದು ಬಹುದೊಡ್ಡ ಸವಾಲು ಹೌದು. ಭಾರತೀಯ ಪ್ರಜಾತಾಂತ್ರಿಕ ಸ್ವರೂಪದ ಸಮಾಜವನ್ನು ಕಟ್ಟಲು ಜಾತಿ ವ್ಯವಸ್ಥೆ ತೊಡಕಾಗಿದೆ. ಭಾರತದಲ್ಲಿರುವ ಪ್ರತಿಯೊಬ್ಬರು ಸಹೋದರರು, ಸಮಾನರು ಎಲ್ಲಕ್ಕಿಂತ ಮಿಗಿಲಾಗಿ ಮನುಷ್ಯರೆಂದು ಪರಿಭಾವಿಸದ ಪ್ರಬುದ್ಧ ಸಮಾಜದಲ್ಲಿ ರಾಷ್ಟ್ರೀಯತೆ, ರಾಷ್ಟ್ರೀಯ ಭಾವೈಕ್ಯತೆ ಮೂಡುವುದಿಲ್ಲ ಎಂಬ ನಿಲುವಿದೆ. ದಮನಿತರು, ಮಹಿಳೆಯರು ಅಂದ ಮೌಢ್ಯಚಾರಣೆಗಳಿಂದ ಜಾತಿ, ಉಪಜಾತಿಗಳಲ್ಲಿ ರೂಡಿಸಿಕೊಂಡಿರುವ ಕಟ್ಟುಪಾಡುಗಳಿಂದಾಗಿ ಶಿಕ್ಷಣ, ಉದ್ಯೋಗ, ಗೌರವಯುತ ಜೀವನ ನಡೆಸಲು ಸಾಧ್ಯವಾಗದಂತಹ ಅಭಿವೃದ್ಧಿ ಕೋಟೆಗಳಾಗಿವೆ. ಬಿ.ಆರ್.ಅಂಬೇಡ್ಕರ್ ಒಂದು ವರ್ಗದ ಪ್ರಭುತ್ವ, ಸರ್ವಾಧಿಕಾರಿ ಧೋರಣೆ ಹಾಗೂ ಅವರ ಏಕಸ್ವಾಮ್ಯವನ್ನು ಧಿಕ್ಕರಿಸಿದರು. ಪ್ರತಿಯೊಬ್ಬನು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಹಾಗೂ ಎಲ್ಲಾ ವಲಯಗಳಲ್ಲಿಯೂ ಒಬ್ಬ ವ್ಯಕ್ತಿ ಮನುಷ್ಯ ಒಂದು ಮೌಲ್ಯ ಎಂಬ ಆದರ್ಶ ವ್ಯವಸ್ಥೆ ಸಾಕಾರಗೊಳ್ಳಬೇಕೆಂದು ಪ್ರತಿಪಾದಿಸಿದ್ದಾರೆ.

ಭಾರತೀಯ ಜಾತಿ ಪದ್ಧತಿಯು ದೇಶದ ಪ್ರಗತಿಗೆ ಮಾರಕವಾಗಿದೆ. ಕಾರ್ಮಿಕರ ಐಕ್ಯತೆ, ರೈತರ ಸಮಾನ ಭೂ ಒಡೆತನ, ಆರ್ಥಿಕ ಸಮಾನತೆ ಸಮಾಜದ ನೈತಿಕತೆಗೆ ಬಲವಾದ ಸವಾಲಾಗಿದೆ. ಸ್ವಜನ ಪಕ್ಷಪಾತಕ್ಕೆ ಎಡೆ ಮಾಡಿಕೊಟ್ಟಿದ್ದು ಸಮಾಜ ಧರ್ಮ ಸುಧಾರಣೆಗೆ ತೊಡಕಾಗಿದೆ. ಜಾತಿ ಪದ್ಧತಿಗೆ ಕಾರಣವಾಗಿರುವ ಧರ್ಮಶಾಸ್ತ್ರ ವಿಧಿಗಳು ಮತ್ತು ನೀತಿ ದೋರಣೆಗಳನ್ನು ತೀವ್ರವಾಗಿ ಖಂಡಿಸಿದರು. ಜಾತಿ ವರ್ಣ ಮತ್ತು ಮನುಸ್ಮತಿ ಪರವಾದಿಗಳನ್ನು ಧಿಕ್ಕರಿಸಿರುತ್ತಾರೆ. ರಾಮದಾಸರ ಹೇಳಿಕೆ ಪ್ರಕಾರ ಪಂಡಿತ ಎಂಬ ಮಾತ್ರಕ್ಕೆ ಗುರು ಎಂದು ಸ್ವೀಕರಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯನ್ನು ವಿರೋಧಿಸಿದರು. ಸಮಾಜ ಸುಧಾರಣೆಯತ್ತ ಮುಖ ಮಾಡಿದ ಎಲ್ಲರನ್ನೂ ಸಂಪ್ರದಾಯವಾದಿಗಳು ಹೆಜ್ಜೆ ಹೆಜ್ಜೆಗೂ ಟೀಕಿಸುತ್ತಾ, ನಿಂದಕರಾಗಿಬಿಡುತ್ತಾರೆ. ವಿಶ್ವಾಸ ಕಳೆದುಕೊಳ್ಳುತ್ತಾರೆ. ಸುಧಾರಕರ ವೈಚಾರಿಕತೆಯ ಮೇಲೆ ಹತೋಟಿಗೆ ಸದಾ ಕ್ರಿಯಾಶೀಲರಾಗಿರುತ್ತಾರೆ.

1892ರ ಅಹಮದಾಬಾದಿನ 8ನೇ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದ ಡಬ್ಲೂ.ಸಿ.ಬ್ಯಾನರ್ಜಿ ರವರು ಸಾಮಾಜಿಕ ಸುಧಾರಣಾ ವಾದಿಗಳ ವಿರುದ್ಧ ಪ್ರಶ್ನಿಸುತ್ತ ರಾಜಕೀಯ ಸುಧಾರಣೆಯ ಪರಧ್ವನಿ ಎತ್ತಿದರು. ವಿಧವೆಯರು ಪುನರ್ ವಿವಾಹವಾಗುತ್ತಿಲ್ಲ, ಬಾಲ್ಯದಲ್ಲಿಯೇ ಮಹಿಳೆಯರ ವಿವಾಹವಾಗುತ್ತಿದೆ ಎಂಬ ಕಾರಣಕ್ಕೆ ನಾವು ರಾಜಕೀಯ ಸುಧಾರಣೆಗೆ ಅನರ್ಹರೇ? ನಮ್ಮ ಪತ್ನಿಯರು, ಹೆಣ್ಣು ಮಕ್ಕಳು ನಮ್ಮೊಂದಿಗೆ ಹೊರಭಾಗಗಳಲ್ಲಿ ಪ್ರವಾಸ, ಗೆಳೆಯರ ಭೇಟಿಗೆ ಜೊತೆ ಬರುವುದಿಲ್ಲ. ನಮ್ಮ ಹೆಣ್ಣು ಮಕ್ಕಳನ್ನು ಆಕ್ಸ್ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಲ್ಲಿ ಕಲಿಯಲು ಕಳುಹಿಸುವುದಿಲ್ಲ ಎಂದ ಮಾತ್ರಕ್ಕೆ ರಾಜಕೀಯ ಸುಧಾರಣೆಗೆ ಯೋಗ್ಯರಲ್ಲವೇ? ಎಂದು ತಿಳಿಸಿದ ಬಗ್ಗೆ ಪ್ರತಿಕ್ರಿಯಿಸುತ್ತ ಉದಾಹರಣೆ ಸಹಿತ ಸಾಮಾಜಿಕ

ಸುಧಾರಣೆಯ ಮಹತ್ವವನ್ನು ಬಿ.ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದಾರೆ.

ಮರಾಠಿ ಪ್ರಾಂತ್ಯದ ಪೇಶ್ವೆಯರ ಆಡಳಿತ ಕಾಲದಲ್ಲಿ ಬ್ರಾಹ್ಮಣರು ವಾಸಿಸುವ ಸ್ಥಳಗಳಲ್ಲಿನ ರಸ್ತೆಗಳಿಗೆ ಅಸ್ಪೃಶ್ಯರು ಪ್ರವೇಶಿಸುವಂತಿರಲಿಲ್ಲ. ಅಸ್ಪೃಶ್ಯರ ನೆರಳು ಸವರ್ಣೀಯರ ಮೇಲೆ ಬಿದ್ದರೆ ಮೈಲಿಗೆಯಾಗುತ್ತಿತ್ತು ಮತ್ತು ಅಸ್ಪೃಶ್ಯರನ್ನು ಗುರುತಿಸಲು ಕೊರಳಲ್ಲಿ ಇಲ್ಲವೇ ಕೈಯಲ್ಲಿ ಕಪ್ಪು ದಾರವನ್ನು ಕಟ್ಟಿಕೊಳ್ಳಬೇಕಾಗಿತ್ತು. ಅದು ಅಸ್ಪೃಶ್ಯ ಜಾತಿಯ ಸಂಕೇತವಾಗಿತ್ತು. ಪೇಶ್ವೆಗಳ ರಾಜಧಾನಿಯಾದ ಪೂನಾ ನಗರದಲ್ಲಿ ಅಸ್ಪೃಶ್ಯರು ಸಂಚರಿಸುವಾಗ ತಮ್ಮ ಬೆನ್ನಿಗೆ ಕಸಬರಿಕೆ ಕಟ್ಟಿಕೊಂಡು, ತಮ್ಮ ಕೊರಳಿಗೆ ಮಡಿಕೆ ಕಟ್ಟಿಕೊಳ್ಳಬೇಕಿತ್ತು. ಇಂತಹ ಆಚರಣೆಗೆ ಕಾರಣ ಅಸ್ಪೃಶ್ಯರು ನಡೆದಾಡಿದ ಧೂಳು ಮತ್ತು ಅವರು ರಸ್ತೆ ಮೇಲೆ ಉಗುಳಿದರು ಕೂಡ ಸವರ್ಣೀಯರಿಗೆ ಅಪವಿತ್ರ (ಮೈಲಿಗೆ) ಮಾಡುತ್ತದೆ ಎಂಬ ನೀಚತನದ ಆಡಳಿತವಿತ್ತು ಎಂದು ತಿರಸ್ಕರಿಸಿದ್ದಾರೆ.

ಭಾರತದ ರಾಜಸ್ಥಾನ ಮತ್ತು ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲಿನ ಮೇಲ್ವರ್ಗದವರು ಬಲಾಯಿಗಳೆಂಬ ಅಸ್ಪೃಶ್ಯರಿಗೆ ಕೆಲವು ನಿಬಂಧನೆಗಳನ್ನು ವಿಧಿಸಿದ್ದರು. ಬಲಾಯಿಗಳು ಅಸ್ಪೃಶ್ಯರಾಗಿ ಹುಟ್ಟಿದ್ದರು ಎಂಬ ಕಾರಣದಿಂದ ಸವರ್ಣೀಯರ ಉಚಿತ ಸೇವೆ ಮಾಡಬೇಕು, ಬಲಾಯಿಗಳು ಸೇವೆ ಮಾಡಿ ಪ್ರತಿಫಲ ನಿರೀಕ್ಷಿಸದೆ ಅವರು ನೀಡಿದ ಕೆಲವೇ ವಸ್ತುಗಳನ್ನು ಧನ್ಯತೆಯಿಂದ ಸ್ವೀಕರಿಸಬೇಕು. ಬಲಾಯಿಗಳು ರೇಷ್ಮೆ ಅಂಚಿನ ಪಂಚೆ ಚಿನ್ನದ ಜರಿ ಹೊಂದಿರುವ ರುಮಾಲುಗಳನ್ನು ಧರಿಸುವಂತಿರಲಿಲ್ಲ.

ಬಲಾಯಿ ಮಹಿಳೆಯರು ಚಿನ್ನ ಬೆಳ್ಳಿಯ ಆಭರಣಗಳನ್ನು, ಅಲಂಕಾರಿಕ ಮೇಲುಹೊದಿಕೆಯ ವಸ್ತ್ರಗಳನ್ನು ಧರಿಸತಕ್ಕದ್ದಲ್ಲ. ಬಲಾಯಿಗಳು ಸವರ್ಣಿಯರು ಮರಣ ಹೊಂದಿದಾಗ ಅವರ ಸಂಬಂಧಿಕರಿಗೆ ಮರಣದ ವಾರ್ತೆ ತಲುಪಿಸುವುದು, ಮಹಿಳೆಯರು ಸೂಲಗಿತ್ತಿಯರಾಗಿ ಕೆಲಸ ಮಾಡಬೇಕು. ಸುವರ್ಣೀಯರ ಮನೆಗಳಲ್ಲಿ ನಡೆಸುವ ಶುಭ ಸಮಾರಂಭಗಳ ಅವಧಿಯಲ್ಲಿ ಗ್ರಾಮದ ಸ್ವಚ್ಛತೆ ಮಾಡುವುದು, ಸಮಾರಂಭಗಳ ಅವಧಿಯಲ್ಲಿ ವಾದ್ಯ ನುಡಿಸುತ್ತಾ ಮೆರವಣಿಗೆಯಲ್ಲಿ ಮುಂದೆ ಸಾಗುವುದು ಇತ್ಯಾದಿ ಆಜ್ಞೆಗಳನ್ನು ವಿಧಿಸಿದ್ದರು. ಸವರ್ಣಿಯರ ನಿಬಂಧನೆಗಳನ್ನು ಪಾಲಿಸದ ಬಲಾಯಿಗಳಿಗೆ ಬಹಿಷ್ಕಾರ ಶಿಕ್ಷೆ ವಿಧಿಸಿದ್ದರು. ನಿಯಮ ಪಾಲಿಸದ ಬಲಾಯಿಗಳನ್ನು ಕೆಲಸಕ್ಕೆ ಕರೆಯಲಿಲ್ಲ, ಅನ್ನ ನೀರು ನೀಡಲಿಲ್ಲ. ರಾಜರಿಗೆ ತಿಳಿಸಿದರೂ ಯಾವ ನ್ಯಾಯ ಸಿಗದ ಹಿನ್ನೆಲೆಯಲ್ಲಿ ಭೂಪಾಲದ ಬಿಕಾನೇರಿ, ಗ್ವಾಲಿಯರ್ ಮುಂತಾದ ಸ್ಥಳಗಳಲ್ಲಿ ಬಹಿಷ್ಕಾರ ಶಿಕ್ಷೆ ಅನುಭವಿಸಿದ ವಿಚಾರಗಳನ್ನು ಅಂಬೇಡ್ಕರ್ ಖಂಡಿಸಿದರು.

ಅಂಬೇಡ್ಕರ್ ಅವರು ನೀಡಿದ ಶೋಷಣೆಯ ಮತ್ತೊಂದು ಘಟನೆ ಗುಜರಾತ್ ರಾಜ್ಯದ ಕವಿಥಾಗ್ರಾಮದ ಸಂಗತಿಯಾಗಿದೆ. ಅಸ್ಪೃಶ್ಯರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಬೇಕೆಂದು ಒತ್ತಾಯ ಮಾಡಬಾರದು ಎಂಬುದಾಗಿ ಬ್ರಾಹ್ಮಣರು ಆಜ್ಞೆ ಮಾಡಿರುವುದು. ದಲಿತರು ಅಸ್ಪೃಶ್ಯರನ್ನು ಕಗ್ಗತ್ತಲಿನಲ್ಲಿಡುವ ಪ್ರಯತ್ನವಲ್ಲದೆ ಮತ್ತೇನು? ಎಂದು ಸವರ್ಣೀಯರನ್ನು ಪ್ರಶ್ನಿಸಿದ್ದಾರೆ. ಜಾನು ಗ್ರಾಮದ ಅಸ್ಪೃಶ್ಯರು ತಾವು ಹಿತ್ತಾಳೆ, ಕಂಚಿನ ಕೊಡಗಳನ್ನು ನೀರು ತರಲು ಬಳಸಿದ್ದಕ್ಕೆ ಸವರ್ಣಿಯರು ತಳಿಸಿದ ಘಟನೆಯನ್ನು ಖಂಡಿಸಿರುತ್ತಾರೆ.

ರಾಜಸ್ಥಾನದ ಜೈಪುರ ಸಂಸ್ಥಾನದ ಚಕ್ವಾರ ಗ್ರಾಮದ ಅಸ್ಪೃಶ್ಯ ತೀರ್ಥಯಾತ್ರೆಗೆ ತೆರಳಿ ಸಂತೋಷದಿಂದ ವಾಪಸ್ಸಾದ ಸನ್ನಿವೇಶದಲ್ಲಿ ಅಲ್ಲಿನ ಜನರು ಔತಣಕೂಟ ಏರ್ಪಡಿಸಿ ಊಟದಲ್ಲಿ ತುಪ್ಪವನ್ನು ಬಳಸಿದ್ದನ್ನು ವಿರೋಧಿಸಿದ ಸವರ್ಣಿಯರು ತುಪ್ಪ ತಿನ್ನುವ ಹಕ್ಕು ಕೇವಲ ಸವರ್ಣಿಯರಿಗೆ ಸೀಮಿತವಾಗಿದೆ ಎಂದು ತುಪ್ಪದಿಂದ ಸಿದ್ಧಪಡಿಸಿದ ಆಹಾರವನ್ನು ಬಿಸಾಡಿದರು ಮತ್ತು ಊಟಕ್ಕೆ ಕುಳಿತಿದ್ದ ಅಸ್ಪೃಶ್ಯನನ್ನು ಥಳಿಸಿದ

ಸಂಗತಿಗಳನ್ನು ಎಷ್ಟು ಸರೊ ಮತು ನಿಮ್ಮ ಕೃತಿಮ ಎಂದು ಪ್ರಶ್ನಿಸಿದಾರೆ.

ನಿಮ್ಮ ದೇಶದ ಅಸ್ಪೃಶ್ಯರನ್ನು ಶಾಲಾ ಪ್ರವೇಶಕ್ಕೆ ಸಮ್ಮತಿಸದೆ ವ್ಯಾಸಂಗದಿಂದ ಅಂತರ ಕಾಯ್ದಿರಿಸಿಕೊಂಡಿರುವ ನೀವು ರಾಜಕೀಯ ಅಧಿಕಾರ ನಡೆಸಲು ಎಷ್ಟು ಸಮರ್ಥರಾಗಿದ್ದೀರಾ? ಕುಡಿಯಲು ನೀರು ಮತ್ತು ಸಾರ್ವಜನಿಕ ರಸ್ತೆಗಳನ್ನು ಉಪಯೋಗಿಸಲು ಅವಕಾಶ ನೀಡದೆ ರಾಜಕೀಯ ಮಾಡುವುದು ಎಷ್ಟು ಸಮಂಜಸವಾಗಿದೆ? ಗಾಳಿ, ಬೆಳಕು, ನೀರು ನೈಸರ್ಗಿಕವಾಗಿ ಎಲ್ಲರಿಗೂ ಭೇಧಭಾವ ರಹಿತವಾಗಿ ಲಭ್ಯವಿರುವ ಸಂಪನ್ಮೂಲಗಳು, ಅವುಗಳನ್ನು ಬಳಸಬೇಡಿ ಎಂದು ನಿರ್ಬಂಧ ವಿಧಿಸಿ ಶಿಕ್ಷೆ ನೀಡುವುದು ಔಚಿತ್ಯಪೂರ್ಣವೇ? ಅಸ್ಪೃಶ್ಯರು ತಮಗೆ ಬೇಕಾಗಿರುವ ಆಹಾರ ಪದಾರ್ಥಗಳನ್ನು ಸೇವಿಸುವುದಕ್ಕೆ ಅಡ್ಡಿ ಮಾಡುವ ಮತ್ತು ಅಸ್ಪೃಶ್ಯರ ಆಹಾರ ಸೇವನೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಮಾಡುವ ನೀವು ರಾಜಕೀಯ ಅಧಿಕಾರಕ್ಕೆ ಯೋಗ್ಯರೇ? ಎಂದು ಪ್ರಶ್ನಿಸುತ್ತಾರೆ. ಭಾರತೀಯ ಸಮಾಜದಲ್ಲಿ ಒಂದು ವರ್ಗ ಮತ್ತೊಂದು ವರ್ಗದ ಮೇಲೆ ಅಧಿಕಾರ, ದರ್ಪ ಮತ್ತು ಶೋಷಣೆ ಮಾಡುವುದಾದರೆ ಪರಕೀಯರು ಮಾಡುವ ಶೋಷಣೆಗಳ ವಿರುದ್ಧ ಸ್ವಾತಂತ್ರ್ಯ ದೀವಿಗೆ ಹಚ್ಚಲು ನಡೆಸುತ್ತಿರುವ ನಿಮ್ಮ ಪ್ರಯತ್ನ ಎಷ್ಟು ನ್ಯಾಯ ಸಮ್ಮತವಾಗಿದೆ? ಎಂದು ಕಾಂಗ್ರೆಸ್ಸಿನ ಸವರ್ಣೀಯರನ್ನು ಬ್ರಾಹ್ಮಣರ ಒಕ್ಕೂಟವನ್ನು ಪ್ರಶ್ನಿಸುವ ಮೂಲಕ ಅಸ್ಪೃಶ್ಯರ ಹಕ್ಕುಗಳು ಮತ್ತು ಅವರ ಗೌರವ ಪೂರಕವಾದ ಜೀವನಕ್ಕೆ ಎದುರಾಗಿರುವ ಸವಾಲುಗಳನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಿದರು.

ಸಮಾಜ ಸುಧಾರಕರಲ್ಲಿ ಜಾತಿ ವಿನಾಶ ಮಾಡಲು ಪ್ರಯತ್ನಿಸಿದವರು ಹೇಳ ಹೆಸರಿಲ್ಲದಂತೆ ನೆಲಕಚ್ಚಿದ್ದರು. ಕಾರಣ ಸುಧಾರಕರಲ್ಲಿ ಕೌಟುಂಬಿಕ ಸುಧಾರಕರು ಸವರ್ಣೀಯರೇ ಬಹಳ ಹೆಚ್ಚಾಗಿದ್ದರು. ರಾಜಕೀಯ ಸುಧಾರಣೆಯಾಗುವ ಮೊದಲು ಸಮಾಜದ ಪುನರ್ ರಚನೆ ಸುಧಾರಣೆಯಾಗಬೇಕು, ರಾಮ್ಸೆ ಮ್ಯಾಕ್ ಡೋನಾಲ್ಡರ (ಇಂಗೆಂಡ್ ಪ್ರಧಾನಿ) ಮತೀಯ ತೀರ್ಪು ಬಗ್ಗೆ ಪ್ರಸ್ತಾಪಿಸುತ್ತಾ "ವಿವಿಧ ಜಾತಿ, ಮತ, ಲಿಂಗ, ವರ್ಗಗಳಿಗೆ ಇಂತಿಷ್ಟೇ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿರುವುದರ ಹಿನ್ನೆಲೆ ಮತ್ತು ಸಾಮಾಜಿಕ ವ್ಯವಸ್ಥೆಯ ರೂಪರೇಷೆಗಳನ್ನು ಪರಿಗಣಿಸಬೇಕು ಎಂಬುದು ಅವರ ಅಭಿಮತವಾಗಿತ್ತು. ಬಹು ಹಿಂದಿನಿಂದಲೂ ಯಾವ ಅಡ್ಡಿ ಆತಂಕಗಳಿಲ್ಲದೆ ಅವ್ಯಾಹತವಾಗಿ ನಡೆಯುತ್ತಿದ್ದ ಶೋಷಣೆ, ದಬ್ಬಾಳಿಕೆ, ಅನ್ಯಾಯದ ವಿರುದ್ಧ ಲಭ್ಯವಾದ ಮತೀಯ ತೀರ್ಪು ಜಾರಿಗೆ ಬಂದದ್ದು ಪ್ರಾಯಶ್ಚಿತ್ತದ ಕನ್ನಡಿಯಂತಾಗಿದೆ ಎಂಬ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಪ್ರಪಂಚದಲ್ಲಿ ಘಟಿಸಿದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳನ್ನು ಉದಾಹರಣೆ ನೀಡುತ್ತಾರೆ. ಐರ್ಲ್ಯಾಂಡಿನ ರೆಡ್ಮಂಡ್ ಆಲ್ ಸ್ಟರ್ ಇಟಲಿಯ ಪಾಟ್ರಿಶಿಯನ್, ಪ್ಲೇಬಿಯನ್ ರು ಕ್ಯಾಥೋಲಿಕ್ ಮತ್ತು ಪ್ರಾಟಿಸ್ಟೆಂಟ್ ಸಮಸ್ಯೆಗಳನ್ನು ಪ್ರತಿ ಪ್ರಸ್ತಾಪಿಸುತ್ತಾ ಯಾವೊಂದು ರಾಜಕೀಯ ಕ್ರಾಂತಿಗಳಿಗೂ ಮೊದಲು ಅಲ್ಲಿನ ಸಮಾಜದಲ್ಲಿ ಬೇರು ಬಿಟ್ಟಿದ್ದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಗಳು ಘಟಿಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿರುವುದನ್ನು ಕಾಣುತ್ತೇವೆ. ಇಂಗ್ಲೆಂಡಿನಲ್ಲಿ ಪ್ಯೂರಿಟರ್ ಪಂಥದ ಅಲ್ಲಿನ ರಾಜಕೀಯ ಸ್ವಾತಂತ್ರ್ಯಕ್ಕೆ ದಿಕ್ಸೂಚಿಯಾಗಿತ್ತು. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮತ್ತು ಮೊದಲು ಅಲ್ಲಿನ ಪ್ಯೂರಿಟರ್ ದಂಗೆ ಪ್ರಥಮ ಚಳುವಳಿಯಾಗಿದೆ. ಅರೇಬಿಯಾದ ರಾಜಕೀಯ ಏಳಿಗೆಗೆ ಮಹಮ್ಮದ್ ಪೈಗಂಬರ್‌ರವರ ತತ್ವ ಮತ್ತು ಸುಧಾರಣಾ ಆಂದೋಲನವೇ ಮೂಲ ಶಕ್ತಿಯಾಗಿದೆ. ಈ ಹಿನ್ನಲೆಯಲ್ಲಿಯೇ ಭಾರತದ ಚಂದ್ರಗುಪ್ತ ಮೌರ್ಯನ ರಾಜಕೀಯ ಕ್ರಾಂತಿಗೆ ಮೊದಲೇ ಬುದ್ಧ, ಮಹಾವೀರರಿಂದ ನೂತನ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ನಡೆದಿರುವುದನ್ನು ಮೆಲಕು ಹಾಕುತ್ತಾರೆ. ಸಿಖ್ಖರ

ಕ್ರಾಂತಿಗೆ ಮೊದಲು ಗುರುನಾನಕ್ ಅವರಿಂದ ಧಾರ್ಮಿಕ ಕ್ರಾಂತಿ ಪಂಜಾಬಿನಲ್ಲಿ ಸಂಭವಿಸಿ ರಾಜಕೀಯ ಏಳಿಗೆಗೆ ನಾಂದಿಯಾಗಿರುವುದು, ಮಹಾರಾಷ್ಟ್ರದಲ್ಲಿ ಶಿವಾಜಿಯ ರಾಜಕೀಯ ಕ್ರಾಂತಿಗೆ ಅಲ್ಲಿನ ಸಂತರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಪ್ರಭಾವವಿದೆ ಎಂದು ತಿಳಿಸುತ್ತಾರೆ. ರಾಜಕೀಯ ಕ್ರಾಂತಿಯಾಗಬೇಕಾದರೆ ಅಲ್ಲಿನ ಜನರಲ್ಲಿ ಮೂಡಿದ್ದ ದಾಸ್ಯತ್ವ ವಿಮೋಚನ ಚಿಂತನೆಯ ಪ್ರಕ್ರಿಯೆಯು ಸಾಮಾಜಿಕ ಸುಧಾರಣೆಯ ಪ್ರಸ್ತುತತೆ ಹಾಗೂ ಮಹತ್ವವನ್ನು ಅತ್ಯಗತ್ಯ ಎಂದು ತಿಳಿಸಿದ್ದಾರೆ.

ಸಮಾಜವಾದಿಗಳ ಆರ್ಥಿಕ ಸಮಾನತೆಯನ್ನು ಅಲ್ಲಗಳೆದ ಅಂಬೇಡ್ಕರ್ ಸಾಮಾಜಿಕ ಸ್ಥಾನಮಾನಗಳು ಅಧಿಕಾರದ ಮೂಲವಾಗಿವೆ. ಕೋಟ್ಯಾಧಿಪತಿಗಳು, ಶ್ರೀಮಂತರು ಸಹ ನಿರ್ಗತಿಕ ಧನವಿಲ್ಲದ ಸಾಧು–ಸಂತರ ಮುಂದೆ ವಿನಯದಿಂದ ತಲೆಬಾಗುವುದಾದರೂ ಏತಕ್ಕಾಗಿ ಎಂದು ಬಹುವಾಗಿ ಪ್ರಶ್ನಿಸುತ್ತಾರೆ.

ಒಬ್ಬ ವ್ಯಕ್ತಿಗೆ ಮತ್ತೊಬ್ಬನ ಸ್ವಾತಂತ್ರ್ಯ ನಿಯಂತ್ರಿಸುವ, ನಿರೂಪಿಸುವ ಅಧಿಕಾರ ಲಭಿಸುವುದು ಧರ್ಮ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಅಂಶಗಳಿಂದ ಎಂದು ಪ್ರತಿಪಾದಿಸಿದ್ದಾರೆ. ಸಮಾಜವಾದಿಗಳು ಕ್ರಾಂತಿ ಮಾಡಲು ಕಾರ್ಮಿಕರನ್ನು ಒಟ್ಟುಗೂಡಿಸುವುದು ಸವಾಲಾಗಿದೆ. ಜನರನ್ನು ಒಟ್ಟುಗೂಡಿಸುವ ಶಕ್ತಿ ಸಮಾಜ ಸುಧಾರಣೆಯಾಗಿದೆ. ರಾಜಕೀಯ, ಆರ್ಥಿಕ ಕ್ರಾಂತಿಗೆ ಮುನ್ನವೇ ಸಮಾಜ ಸುಧಾರಣೆಯಾಗಬೇಕು. ಭಾರತದಲ್ಲಿನ ಸುಧಾರಣೆಗಳಿಗೆ ಪ್ರಯತ್ನಿಸಿದಾಗ ಎದುರಾಗುವ ಸಮಸ್ಯೆ ಎಂದರೆ ಜಾತಿ ಎಂಬ ಮಹಾ ಶಕ್ತಿ ಮಾರಿ ಎಂಬುದು ಸತ್ಯ. ಜಾತಿ ವ್ಯವಸ್ಥೆಯನ್ನು ಸುಧಾರಿಸದೆ ರಾಜಕೀಯ, ಆರ್ಥಿಕ ಸುಧಾರಣೆ ಎಂಬುದು ಕನಸಿನ ಮಾತು ಎಂಬ ಕಟು ಸತ್ಯವನ್ನು ಬಿಚ್ಚಿಟ್ಟವರೆ ಅಂಬೇಡ್ಕರ್ ರವರಾಗಿದ್ದಾರೆ.

ಜಾತಿ ಪದ್ಧತಿ ಕಾರ್ಮಿಕರನ್ನು ಶ್ರೇಣಿಕರಿಸಿದೆ. ವ್ಯಕ್ತಿಯ ಪ್ರತಿಭೆ ಸಾಮರ್ಥ್ಯಕ್ಕೆ ಬೆಲೆ ಕೊಡದೆ ತಮ್ಮ ವಂಶಜರ ಹುಟ್ಟಿನ ಮೂಲವನ್ನು ಪರಿಗಣಿಸಿ, ಅವರ ಕೆಲಸ ವೃತ್ತಿಯ ಜವಾಬ್ದಾರಿಯನ್ನು ನೀಡಿರುತ್ತಾರೆ. ಪ್ರತಿಯೊಬ್ಬರಿಗೂ ತನ್ನ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು. ಮೇಲ್ಜಾತಿ ಅವರು ಉನ್ನತ ಹುದ್ದೆಗಳನ್ನು ಅಂದರೆ ಮಂತ್ರಿ, ದೇವತಾ ಕಾರ್ಯ, ಅಧ್ಯಾಪನ ಷಟ್ಕರ್ಮ ನಿರತರಾದರೆ ಕೆಳಮಟ್ಟದ ವೃತ್ತಿಗಳಿಗೆ ಕೆಳವರ್ಗ ಜನರೆ ಮೀಸಲು ಎಂಬುದು ಎಷ್ಟು ಸೂಕ್ತ ಎಂದು ಪ್ರಶ್ನಿಸಿದ್ದಾರೆ. ಅತ್ಯಂತ ಹೀನ ಕೆಲಸಗಳನ್ನು ಅಸ್ಪೃಶ್ಯರು ಮಾಡಬೇಕೆಂದು ತಿಳಿಸಿದರೆ ಮನಃಪೂರ್ವಕವಾಗಿ ಪ್ರತಿಭೆ ಸಾಮರ್ಥ್ಯವಿರುವ ಯಾವ ವರ್ಗದವರು ತೃಪ್ತಿದಾಯಕವಾಗಿ ಕಾರ್ಯನಿರ್ವಹಿಸಲು ಆಸಕ್ತಿ ವಹಿಸಲಾರರು. ಈ ಹಿನ್ನಲೆಯಿಂದ ಗಮನಿಸಿದ್ದಲ್ಲಿ ಜಾತಿ ಪದ್ಧತಿಯು ಆರ್ಥಿಕ ದೃಷ್ಟಿಕೋನದಿಂದಲೂ ಹೆಚ್ಚು ಅಪಾಯಕಾರಿಯಾಗುವುದು ಎಂಬುದಾಗಿ ಅರ್ಥೈಸಲಾಗಿದೆ.

ಜಾತಿ ವ್ಯವಸ್ಥೆಯು ಜನಾಂಗೀಯ ವಂಶಾವಳಿಯಲ್ಲಿ ರಕ್ತ ಪರಿಶುದ್ಧತೆಯನ್ನು ಕಾಪಾಡಿಕೊಂಡಿದೆ ಎಂಬ ವಿಚಾರವನ್ನು ಅಲ್ಲೆಗಳೆಯುತ್ತಾರೆ. ಭಾರತದಲ್ಲಿ ವಿದೇಶಿ ಜನಾಂಗದವರೊಡನೆ ಹೊಂದಾಣಿಕೆ ಮಾಡಿಕೊಳ್ಳದಂತಹ ಯಾವುದೇ ವರ್ಗ, ಜಾತಿ ಅಸ್ತಿತ್ವದಲ್ಲಿ ಇಲ್ಲ. ಮರಾಠರು, ರಜಪೂತರು ಮತ್ತು ಬ್ರಾಹ್ಮಣರು ಪರಿಶುದ್ಧರೆಂಬುದಾಗಿ ಹೆಚ್ಚಿನ ಗರ್ವಹಿರಿಮೆಯಿಂದ ಸಂತೋಷ ವ್ಯಕ್ತಪಡಿಸುವವರಲ್ಲಿಯೂ ವಿದೇಶಿಯ ರಕ್ತ ಸಂಕರವಾಗಿದೆ ಎಂದಾಗ ಪರಿಶುದ್ಧತೆ ಎಂಬುದು ಎಲ್ಲಿಯ ವಿಚಾರ ಎಂದು ಪ್ರಶ್ನಿಸಿದ್ದಾರೆ.

ಮದ್ರಾಸಿನ ಅಸ್ಪೃಶ್ಯನಿಗೂ ಬಂಗಾಳದ ಅಸ್ಪೃಶ್ಯನಿಗೂ ಯಾವ ವಂಶೀಯ ಸಂಬಂಧವಿದೆ? ಮದ್ರಾಸಿನ ಬ್ರಾಹ್ಮಣನಿಗೂ ಕಾಶ್ಮೀರದ ಬ್ರಾಹ್ಮಣನಿಗೂ ಯಾವ ರಕ್ತ ಸಂಬಂಧವಿದೆ? ಮದ್ರಾಸಿನ ಬ್ರಾಹ್ಮಣ ಹಾಗೂ ಅಲ್ಲಿಯ ಅಸ್ಪೃಶ್ಯನ ನಡುವೆ ಯಾವೆಲ್ಲ ಜನಾಂಗೀಯ ವ್ಯತ್ಯಾಸಗಳಿವೆ? ಪಂಜಾಬಿನ ಬ್ರಾಹ್ಮಣ

ಮತ್ತು ಪಂಜಾಬಿನ ಸಮಗಾರ ಜನಾಂಗಗಳ ನಡುವೆ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ. ಇವೆರಡೂ ಒಂದೇ ವಂಶಕ್ಕೆ ಸೇರಿದವುಗಳು ಎಂದು ತಿಳಿಸುತ್ತಾರೆ. ಜಾತಿಯ ಉಗಮದ ಬಗ್ಗೆ ಪ್ರಸ್ತಾಪಿಸುತ್ತ ಜಾತಿ ವ್ಯವಸ್ಥೆ ಕೇವಲ ಸ್ವಾರ್ಥ ಹಿತಾಸಕ್ತಿಗಾಗಿ ಮತ್ತು ಅಮಾಯಕ ಜನರ ಮೇಲೆ ಬಲವಂತವಾಗಿ ಹತೋಟಿ ಸಾಧಿಸಲು ಸೃಷ್ಟಿ ಮಾಡಿಕೊಂಡ ವ್ಯವಸ್ಥಿತ ಪಿತೂರಿ ಎಂದು ನಿರೂಪಿಸಿದ್ದಾರೆ. ಜಾತಿಯ ಸೃಷ್ಟಿ ಶ್ರೇಷ್ಠ ಸಂತಾನ ಎಂಬುದಕ್ಕೆ ಬದಲಾಗಿ ದುರ್ಬಲರ ಮೇಲೆ ಮಾಡಬಹುದಾದ ಶೋಷಣೆ, ದುರ್ಬಲರ ಮೇಲೆ ಸವಾರಿ ಮಾಡಬಹುದಾದ ಸಾಧನವಾಗಿದೆ. ಜಾತಿ ವ್ಯವಸ್ಥೆ ಸಮಾಜವನ್ನು ವಿಭಜಿಸಿ ಆಡಳಿತ ಮಾಡುವ ಅಸ್ತ್ರವಾಗಿದೆ. ದುರ್ಬಲರು ಬಾಹ್ಯ ಸಂಪರ್ಕ ಸಾಧಿಸದ ಬಿಲದೊಳಗಿನ ಇಲಿಯಂತಿರಬೇಕೇ? ಎಂದು ವಿಶ್ಲೇಷಿಸುತ್ತಾರೆ. ಜಾತಿ ವ್ಯವಸ್ಥೆ ಕ್ರೂರವಾಗಿದ್ದು ಸಮಾಜ ವಿರೋಧಿ ಹಾಗೂ ಪ್ರತ್ಯೇಕತೆಯನ್ನು ಹುಟ್ಟಿ ಹಾಕುವ ಸಾಧನವಾಗಿದೆ ಎಂಬುದಾಗಿ ತಿಳಿಸಿದ್ದಾರೆ.

ಒಂದು ಜಾತಿ ಮತ್ತು ಅದರ ಉಪಜಾತಿ ಪಂಗಡಗಳು ತಮ್ಮ ಆಚಾರ ವಿಚಾರಗಳಲ್ಲಿ ವಿಭಿನ್ನವಾಗಿವೆಯಾದರೂ ಮೂರನೇ ಜಾತಿಯಿಂದ ತಮ್ಮ ಜಾತಿಗೆ ಅಂದರೆ ಬ್ರಾಹ್ಮಣ ವರ್ಗದ ಹಿತಾಸಕ್ತಿಗೆ ದಕ್ಕೆ ಉಂಟಾದರೆ ಎಲ್ಲಾ ಬ್ರಾಹ್ಮಣರು ಒಟ್ಟುಗೂಡಿ ಎಚ್ಚರಿಕೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ. ಬ್ರಾಹ್ಮಣೇತರರಿಗೆ ಬ್ರಾಹ್ಮಣರಿಂದ ತೊಂದರೆ ಬಂದರೆ ಬ್ರಾಹ್ಮಣರಲ್ಲದವರು ಒಟ್ಟಾಗಿ ತಮ್ಮಗಳ ಹಿತಾಸಕ್ತಿಗಾಗಿ ಹೋರಾಟ ಮಾಡಬೇಕಿದೆ. ಹಿಂದುಗಳಲ್ಲಿನ ಜಾತಿ ಭೇದ ಭಾವನೆಗಳು ಐಕ್ಯತೆಗೆ ಬದಲಾಗಿ ದ್ವೇಷ ವೈಶಮ್ಯ ಉಂಟಾಗಲು ಸಾಧ್ಯವಾದಂತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಆದಿವಾಸಿಗಳನ್ನು ಕುರಿತು ಮೇಲ್ವರ್ಗದವರನ್ನು ಪ್ರಶ್ನಿಸುತ್ತಾರೆ. ಆದಿವಾಸಿಗಳ ಸ್ಥಿತಿ ಮತ್ತು ಅವರ ಅಗತ್ಯತೆಗಳನ್ನು ಪೂರೈಸುವಲ್ಲಿ ಮತ್ತು ತಮ್ಮವರೆಂದು ಒಪ್ಪಿಕೊಂಡು ಅವರ ಜೊತೆ ಬಾಂಧವ್ಯ ಹೊಂದಲು ಆಸಕ್ತರಾಗದ ನಿಮಗೆ ಆತ್ಮಸಾಕ್ಷಿ ಇದೆಯೇ? ಎಂದು ಪ್ರಶ್ನೆ ಮಾಡುತ್ತಾರೆ.

ಸವರ್ಣೀಯರು ಜಾತಿಯೆಂಬ ಹಣೆಪಟ್ಟಿ ಕಟ್ಟಿಕೊಂಡು ತಮ್ಮವರು ಹೊರಹೋಗದಂತೆ, ಬೇರೆ ಜಾತಿಯವರು ಒಳನುಸುಳದಂತೆ ಪರದೆ ನಿರ್ಮಿಸಿಕೊಂಡಿರುವುದು ಮೌಢ್ಯಾಚರಣೆಗಳ ಪರಮಾವಧಿಯಲ್ಲವೇ? ಜ್ಞಾನವೆಂಬ ದೀಪವನ್ನು ತಮ್ಮಲ್ಲಿ ಉಳಿಸಿಕೊಂಡು ಇತರರನ್ನು ಕಗ್ಗತ್ತಲೆಯಲ್ಲಿಟ್ಟಿದ್ದರು. ಜಾತಿ ವ್ಯವಸ್ಥೆ ಹಿಂದೂ ಧರ್ಮದ ವಿಕಸನಕ್ಕೆ ಅಡ್ಡಿ ಮಾಡಿದೆ. ಜಾತಿ ಜನ್ಮದಿಂದಲೇ ಪ್ರಾರಂಭವಾಗಿದ್ದು ದಮನಿತರು ಯಾವ ಜಾತಿಗೆ ಸೇರಬೇಕೆಂಬ ಗೊಂದಲದ ಸ್ಥಿತಿಯನ್ನು ಉಂಟು ಮಾಡಿದೆ.

ಜಾತಿಯು ನೈತಿಕತೆಯ ಶೋಚನೀಯ ಪರಿಸ್ಥಿತಿಗೆ ಕಾರಣವಾಗಿದೆ. ಒಂದು ನಿರ್ದಿಷ್ಟ ಜಾತಿಗೆ ಸೇರಿದವನು ಆ ಜಾತಿಯ ಆಚಾರ ವಿಚಾರ, ನೀತಿ, ನಿಷ್ಠೆಗಳಿಗೆ ಸೀಮಿತವಾಗಿದ್ದು ದಾನ, ಧರ್ಮ, ದಯೆ, ಕರುಣೆ, ಸೇವೆ, ಬೆಂಬಲ ಎಲ್ಲವೂ ಆಯಾ ಜಾತಿಯವರಿಗೆ ಮೀಸಲಾಗಿವೆ ಎನ್ನುತ್ತಾರೆ. ಮಹಾತ್ಮನಾಗಲಿ ಮಹಾಪುರುಷರಾಗಲಿ ಅದನ್ನು ಸಮ್ಮತಿಸಿ ಬೆಂಬಲವಾಗಿ ನಿಲ್ಲುವ ಹಿಂದೆ ಜಾತಿ ಎಂಬ ವಟವೃಕ್ಷ ಬೆಳೆದಿರುತ್ತದೆ. ಜಾತಿ ಎಂಬ ಸ್ವಾರ್ಥ ಸ್ವಜಾತಿ ಪಕ್ಷಪಾತದಿಂದ ದೇಶದ ಹಿತಾಸಕ್ತಿ ಕಡೆಗಣಿಸಬಹುದಾದ ದುಷ್ಪರಿಣಾಮಗಳ ಬಗ್ಗೆ ಪರಾಮರ್ಶೆ ಮಾಡುವಂತಿದೆ.

ಜಾತಿ ವ್ಯವಸ್ಥೆಯಲ್ಲಿ ಆಗಬೇಕಾಗಿರುವ ಸುಧಾರಣೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಒಂದು ಸಮಾಜ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರ ತತ್ವಾದರ್ಶಗಳ ನೆಲೆಗಟ್ಟಿನಲ್ಲಿ ಸ್ಥಾಪಿತವಾಗಬೇಕೆಂದು ತಿಳಿಸಿದ್ದಾರೆ. ಜಾತ್ಯತೀತರಾಗಿ ಸ್ವಾತಂತ್ರ ಉದ್ಯೋಗ ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು. ಭಾರತೀಯರಾದ ನಾವೆಲ್ಲರೂ ಸಮಾನತೆಯ ಆಧಾರದ ಮೇಲೆ ಭ್ರಾತೃತ್ವ ಸಾಧ್ಯವಾಗಿಸಬಹುದು.

ಪ್ರತಿಯೊಬ್ಬರಲ್ಲಿರುವ ಮನೆಯ ಪರಿಸರ, ಪರಿಸ್ಥಿತಿ ಅವರ ಪ್ರಯತ್ನ ಜೈವಿಕ ಅನುವಂಶೀಯತೆಯಲ್ಲಿ ವ್ಯತ್ಯಾಸವಿದ್ದರೆ ಅವರನ್ನು ಸಾಮಾಜಿಕವಾಗಿಯು ಅಸಮಾನರು ಎಂದು ನಿರ್ಧರಿಸಬೇಕೇ? ಎಂದು ಪ್ರಶ್ನಿಸುತ್ತಾರೆ.

ಭಾರತದಲ್ಲಿನ ಸಾವಿರಾರು ಜಾತಿಗಳನ್ನು ಚಾತುರ್ವರ್ಣದಲ್ಲಿ ಹಿಡಿತ ಸಾಧಿಸಬೇಕೆಂಬ ಬ್ರಾಹ್ಮಣರನ್ನು ಅವರ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. ಚಾತುರ್ವರ್ಣ ವ್ಯವಸ್ಥೆ ಹೆಚ್ಚು ಅನೇಕವಾಗಿದೆ ಹಾಗೂ ಅವೈಜ್ಞಾನಿಕವಾಗಿದೆ. ರಾಮಾಯಣದಲ್ಲಿ ಶೂದ್ರನಾದ ಶಂಭೂಕನು ಜ್ಞಾನಾರ್ಜನೆಯ ಮೂಲಕ ಬ್ರಾಹ್ಮಣನಾಗಲು ಹೊರಟಾಗ ವರ್ಣ ಉಲ್ಲಂಘನೆಯ ಅಪರಾಧಕ್ಕಾಗಿ ರಾಮನು ಶಂಭೂಕನನ್ನು ಹತ್ಯೆ ಮಾಡಿ ರಾಜಧರ್ಮ ಪಾಲಿಸಿದ ಎಂದಿದ್ದಾರೆ. ಇದು ಎಷ್ಟು ಸಮಂಜಸ?

ಚಾತುರ್ವರ್ಣ ವ್ಯವಸ್ಥೆ ಮಹಿಳೆಯರಿಗೆ ಅನ್ವಯಿಸುತ್ತದೆಯೇ? ಒಂದು ವೇಳೆ ಒಪ್ಪಿದರೆ ಮಹಿಳಾ ಪುರೋಹಿತರನ್ನು, ಮಹಿಳಾಯೋಧರು, ವ್ಯಾಪಾರಿಗಳು, ಆಡಳಿತಗಾರರು ಎಂದು ಬ್ರಾಹ್ಮಣ ಸಮಾಜ ಒಪ್ಪಿಕೊಳ್ಳಲು ಸಾಧ್ಯವಾದೀತೆ? ಎಂದು ತಿಳಿಸಿದ್ದಾರೆ. ಚಾತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರು ಮೇಲಿನ ಮೂರು ವರ್ಣಗಳ ಸೇವೆಗೆ ಮೀಸಲಿರಬೇಕೆಂಬ ವಾದಗಳನ್ನು ವಿರೋಧಿಸುತ್ತಾರೆ. ಶೂದ್ರನಾಗಿ ಜನಸಿದವನು ವಿದ್ಯಾಭ್ಯಾಸ ಮಾಡುವಂತಿಲ್ಲ. ಧಾರ್ಮಿಕ ಗ್ರಂಥಗಳನ್ನು ಓದುವುದು ಕೇಳುವಂತಿಲ್ಲ, ಶಸ್ತ್ರಾಸ್ತ್ರ ಬಳಸುವಂತಿಲ್ಲ, ತುಪ್ಪ ತಿನ್ನಬಾರದು, ರತ್ನ ಖಚಿತ ಆಭರಣ ಧರಿಸಬಾರದು, ರೇಷ್ಮೆ ಜಲತಾರಿ ರೂಮಾಲು ಧರಿಸುವಂತಿಲ್ಲ, ತಾಮ್ರ, ಕಂಚು, ಬೆಳ್ಳಿ, ಹಿತ್ತಾಳೆ, ಗೃಹೋಪಯೋಗಿ ವಸ್ತುಗಳನ್ನು ಬಳಸುವಂತಿಲ್ಲ ಮೊದಲಾದ ವಿಚಾರಗಳಿಗೆ ಸಂಬಂಧಿಸಿದಂತೆ ಶೋಷಣೆ ಮಾಡುವ ವರ್ಣಶ್ರೇಷ್ಠರ ವೈಚಾರಿಕತೆ ಅಲ್ಲದ ಮೌಢ್ಯಾಚಾರಣೆಗಳನ್ನು ಖಂಡ ತುಂಡಾಗಿ ವಿರೋಧಿಸಿದ್ದಾರೆ. ಮೌರ್ಯ ಸಾಮ್ರಾಜ್ಯ ಸ್ಥಾಪನೆ ಹಾಗೂ ಅಲ್ಲಿನ ರಾಜರ ಸುಧಾರಣಾ ಕ್ರಮಗಳನ್ನು ಒಪ್ಪಿ ಶೂದ್ರರು ಸಹ ಪ್ರಭುದ್ಧರಾಗಿ ಆಡಳಿತ ನಡೆಸಿ ಸೇವೆಗೈದಿರುವ ಬಗ್ಗೆ ಪ್ರಶಂಸೆ ಮಾಡುತ್ತಾರೆ.

ಜಾತಿ ವ್ಯವಸ್ಥೆ ವೇದಗಳಷ್ಟೇ ಪ್ರಾಚೀನವಾಗಿದ್ದು ಬ್ರಾಹ್ಮಣರು ಕ್ಷತ್ರಿಯರನ್ನು, ಕ್ಷತ್ರಿಯರು ಬ್ರಾಹ್ಮಣರನ್ನು ನಿರ್ನಾಮ ಮಾಡಲು ಮಹಾಭಾರತದಲ್ಲಿ ಶ್ರೀ ಕೃಷ್ಣನ ಅವತಾರ ಸಂಭವಿಸುತೆಂದು ಭಾಗವತದ ಉಲ್ಲೇಖವನ್ನು ತಿಳಿಸುತ್ತಾರೆ. ಜಾತಿ ವ್ಯವಸ್ಥೆ ಎಲ್ಲಾ ಧರ್ಮ ಪಂಥಗಳಲ್ಲಿವೆ ಆದರೆ ಹಿಂದೂ ಧರ್ಮದಲ್ಲಿ ಹೆಚ್ಚು ಅಪಾಯಕಾರಿಯಾಗಿದೆ. ಮುಸ್ಲಿಂ ಮತ್ತು ಸಿಖ್ಖರಲ್ಲಿ ಒಳಜಾತಿ ವಿವಾದ ಹಿಂದೂಗಳಲ್ಲಿರುವಷ್ಟು ಅಗಾಧವಾಗಿಲ್ಲ. ಭಾರತದ ಹಿಂದುಗಳಲ್ಲಿ ಜಾತೀಯ ನೀತಿ ನಿಯಮಗಳ ಸೀಮಾ ರೇಖೆ ದಾಟಿದರೆ ಬಹಿಷ್ಕಾರ ಹಾಕುತ್ತಾರೆ. ಜಾತಿ ಪರಿ ದಾಟಿದರೆ ಧರ್ಮ ಉಲ್ಲಂಘಿಸಿದಂತೆ ಎಂಬುದಾಗಿ ತಿಳಿಸಿದ್ದಾರೆ. ಮುಸ್ಲಿಂ ಮತ್ತು ಸಿಖ್ಖರಲ್ಲಿ ಜಾತಿ ನಿಯಮ ಉಲ್ಲಂಘಿಸಿದರೆ ಬಹಿಷ್ಕಾರದಂತಹ ಕಠಿಣ ಶಿಕ್ಷೆ ವಿಧಿಸುವ ಪದ್ಧತಿ ಇಲ್ಲವಾಗಿದೆ.

ಜಾತಿಗಳಲ್ಲಿ ವ್ಯತ್ಯಾಸವಿದ್ದರೂ ವಿಭಜನೆಯಾಗದೆ ಉಳಿದಿದೆ ಮುಂದೆಯೂ ಉಳಿಯಲು ಆಗಿದೆ ಎಂಬ ರಾಧಾಕೃಷ್ಣರ ಪ್ರಶ್ನೆಗೆ ಉತ್ತರಿಸುತ್ತ ಬದುಕಿ ಉಳಿಯುವುದು ಎಂದರೆ ಸಮಾಜದಲ್ಲಿ ಜೀವಂತವಾಗಿರುವುದಕ್ಕೂ ಘನತೆ ಗೌರವದಿಂದ ಬಾಳಿ ಬದುಕುವುದಕ್ಕೂ ಹಿರಿಮೆ, ಹೆಮ್ಮೆ, ಹೆಗ್ಗಳಿಕೆಯ ಜೀವನಕ್ಕೂ ಸಾಕಷ್ಟು ವ್ಯತ್ಯಾಸವಿದೆ ಎಂದು ತಿಳಿಸುತ್ತಾರೆ.

ಹಿಂದೂ ಸಾಮಾಜಿಕ ಸಂರಚನೆಯಲ್ಲಿ ನಾವು ಜನಸಾಮಾನ್ಯರನ್ನು ನಮ್ಮ ರಕ್ಷಣೆಗಾಗಿ ಬೇರೆಯವರ ಮೇಲೆ ದಾಳಿ ಮಾಡಲು ಸಿದ್ಧಗೊಳಿಸಲು ಸಾಧ್ಯವಿಲ್ಲ. ಜಾತಿ ವ್ಯವಸ್ಥೆಯ ತಳಹದಿಯ ಮೇಲೆ ಭವ್ಯ ಸೌಧವನ್ನು ಉದಾತ್ತ ದೇಶವನ್ನು ಮಾನವೀಯ ಮೌಲ್ಯಗಳನ್ನು ಸಂಸ್ಥಾಪಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಜಾತಿ ವ್ಯವಸ್ಥೆಯ ಬದಲಾವಣೆಯ ಬಗ್ಗೆ ಒಳ ಜಾತಿಗಳ ವಿನಾಶ ವಿಚಾರವನ್ನು ತಿರಸ್ಕರಿಸುತ್ತಾರೆ. ದಕ್ಷಿಣ ಭಾರತದ ಬ್ರಾಹ್ಮಣರು ಸಸ್ಯಹಾರಿಗಳಾದರೆ ಬಂಗಾಲ ಮತ್ತು ಕಾಶ್ಮೀರಿ ಬ್ರಾಹ್ಮಣರು ಮಾಂಸಾಹಾರಿಗಳಾಗಿದ್ದಾರೆ. ಸಹಪಂಕ್ತಿ ಭೋಜನವು ಸೂಕ್ತ ಮಾರ್ಗ ಎಂಬುದನ್ನು ಸಮ್ಮತಿಸದ ಅಂಬೇಡ್ಕರ್ ಅವರು ಅಂತರ್ಜಾತಿ ವಿವಾಹ ಮಾರ್ಗವೇ ಹೆಚ್ಚು ಸಮಂಜಸ ಎಂದು ತಿಳಿಸಿದ್ದಾರೆ. ಜಾತಿ ವ್ಯವಸ್ಥೆ ಆಚರಣೆಯಲ್ಲಿ ಜನರ ಪಾಲನೆಯನ್ನು ಟೀಕಿಸದೆ ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿ ನೋಡಬಹುದಾದ ಶಾಸ್ತ್ರ ವಿಧಿಗಳಿಂದ ಜನರ ಮನೋಭಾವದಲ್ಲಿ ಮೂಡಿರುವ ಧಾರ್ಮಿಕ ಭಾವನೆಗಳನ್ನು ಅವರ ತಲೆಯಿಂದ ನಿರ್ನಾಮ ಮಾಡಬೇಕು. ಬುದ್ಧ, ಬಸವ, ಗುರುನಾನಕ್ ಕಂಡುಕೊಂಡ ಮಾರ್ಗಗಳನ್ನು ಅನುಸರಿಸಬೇಕು. ಶಾಸ್ತ್ರ ಸಂಹಿತೆಗಳನ್ನು ಮುಲಾಜಿಲ್ಲದೆ ತಿರಸ್ಕರಿಸಬೇಕು ಎಂಬ ಧೈರ್ಯ ಜನರಲ್ಲಿ ಮೂಡಿದಾಗ ಮಾತ್ರ ಜಾತಿ ವಿನಾಶ ಸಾಧ್ಯ ಎನ್ನುತ್ತಾರೆ. ಬ್ರಾಹ್ಮಣರು ಜಾತಿ ವಿನಾಶಕ್ಕೆ ಆಸಕ್ತರಾಗಿಲ್ಲ ದೇಶದ ಹಿತ ಕಾಯುವ ಬದಲು ಸ್ವಾರ್ಥರಾಗಿದ್ದು ತಮ್ಮ ಜಾತಿಯವರ ಹಿತಾಸಕ್ತಿಗಳ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಿದ್ದಾರೆ ಎಂಬುದು ಅಂಬೇಡ್ಕರ್ ಅಭಿಮತ. ಜಾತಿಯ ಶ್ರೇಣೀಕರಣದಿಂದ ಅಪಾಯವಿದೆ. ಪ್ರತಿಯೊಬ್ಬರು ತಾನು ಮೇಲ್ಸ್ತರದಲ್ಲಿದ್ದೇನೆ, ಕೆಳಗಿನವರಿಗಿಂತ ಹೆಚ್ಚಿನ ಸ್ಥಾನಮಾನ ನನ್ನದಾಗಿದೆ ಎಂಬ ಹೆಗ್ಗಳಿಕೆಯಲ್ಲಿದ್ದಾನೆ. ಜಾತಿ ವ್ಯವಸ್ಥೆಯಲ್ಲಿರುವ ಮೇಲು ಕೀಳು, ಹುಚ್ಚ ನೀಚ ಎಂಬ ಭಾವನೆ ಜಾತಿ ವಿನಾಶಕ್ಕೆ ತಡೆಗೋಡೆಗಳಾಗಿವೆ. ಒಂದು ಜಾತಿಗಿಂತ ಮೇಲಿನ ಜಾತಿಯೊಂದಿಗೆ ಸಹ ಭೋಜನ ಮತ್ತು ಅಂತರ್ಜಾತಿ ವಿವಾಹಕ್ಕೆ ಬಯಸಿದರೆ ಮೇಲಿನ ಜಾತಿಯವರು ಕೆಳಗಿನ ಜಾತಿಯವರೊಂದಿಗೆ ಅಂತರ್ಜಾತಿ ವಿವಾಹ ಹಾಗೂ ಸಹಪಂಕ್ತಿ ಭೋಜನ ಏರ್ಪಡಿಸಿಕೊಳ್ಳಲು ಪ್ರಯತ್ನಿಸಿ ಎಂದು ತಿಳಿಸುತ್ತಾ ಜಾತಿಯ ಗುಲಾಮರಾಗಿದ್ದಾರೆ.

ಹಿಂದೂ ಧರ್ಮ ಶಾಸ್ತ್ರಗಳು, ವೇದ, ಸ್ಮೃತಿ, ಶೃತಿಗಳಲ್ಲಿ ಮನಸ್ಮೃತಿ, ಬೃಹಸ್ಪತಿ ಸ್ಮೃತಿಗಳ ಬಗ್ಗೆ ಪರಾಮರ್ಶಿಸಿದ್ದಾರೆ. ಧಾರ್ಮಿಕ ಗ್ರಂಥಗಳಲ್ಲಿ ದಾಖಲಾಗಿರುವ ಅಂಶಗಳಿಂದ ಸ್ವತಂತ್ರ ಚಿಂತನೆಗೆ ಅಡ್ಡಿಯಾಗಿದೆ. ವರ್ಣದಲ್ಲಿನ ನಂಬಿಕೆ ವೈಚಾರಿಕತೆಗೆ ವಿರುದ್ಧವಾಗಿದೆ.

ಜಾತಿ ವ್ಯವಸ್ಥೆಯಲ್ಲಿ ರಾಜಿ ಸಂಧಾನ, ಶುದ್ಧೀಕರಣ ಚಳುವಳಿ ಕುರಿತು ಜಾತೀಯತೆಗೆ ಜೀವಜಲವಾಗಿದೆ. ಆದ್ದರಿಂದ ಧರ್ಮ ಗ್ರಂಥಗಳ ಶಾಸ್ತ್ರ ವಿಧಿಗಳನ್ನು ತಿರಸ್ಕರಿಸಬೇಕು ಎಂಬುದು ಅಂಬೇಡ್ಕರ್ ಅವರ ಅಭಿಮತವಾಗಿದೆ. ಹಿಂದೂ ಧರ್ಮವೂ ಯಜ್ಞ–ಯಾಗ, ಪೂಜಾ ವಿಧಿಗಳು ರಾಜಕೀಯ, ಸಾಮಾಜಿಕ ಹಿತಾಸಕ್ತಿಗಳ ನಿಯಮಗಳಾಗಿವೆ. ಅನುಲ್ಲಂಗನೀಯ ನಿಯಮವಾಗಿದೆ. ಧರ್ಮ ಎಂದರೆ ಎಲ್ಲ ಸಮುದಾಯದವರಿಗೂ ಸಮ್ಮತಿಯಾಗುವಂತಹ ಧರ್ಮಗ್ರಂಥವಿರಬೇಕು, ಸನಾತನವಾಗಿ ಶೋಷಿಸುವ ಪುರಾಹಿತಶಾಹಿಗಳ ಪ್ರಭುತ್ವವನ್ನು ರದ್ದುಪಡಿಸಬೇಕು. ಇಲ್ಲವೇ ಎಲ್ಲಾ ವರ್ಗದವರಿಗೂ ಸರ್ಕಾರ ಪುರೋಹಿತನಾಗಲು ಅವಕಾಶ ಕಲ್ಪಿಸಬೇಕು. ಸರ್ಕಾರ ಶಾಸನ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು. ಪುರೋಹಿತನಾದವನನ್ನೇ ಸರ್ಕಾರಿ ನೌಕರನನ್ನಾಗಿ ಪರಿಗಣಿಸಬೇಕು ಸೇವಾ ನಿಯಮಗಳಡಿ ಸೇವೆ ಸಲ್ಲಿಸುವಂತಿರಬೇಕು.

ಪರಿಶ್ರಮವಿಲ್ಲದ ಯಾವುದೇ ನೈತಿಕ ನಿಬಂಧನೆಗಳಿಗೆ ಒಳಗಾಗದಿರುವ ವೃತ್ತಿ ಎಂದರೆ ಹಿಂದೂ ಪುರೋಹಿತ ವೃತ್ತಿ. ಹಿಂದೂ ಸಮಾಜವನ್ನು ನಾಶ ಮಾಡಿರುವ ವಿಷವೆಂದರೆ ಬ್ರಾಹ್ಮಣವಾದ ಎಂದಿದ್ದಾರೆ. ಧಾರ್ಮಿಕ ತತ್ವ ಸಿದ್ಧಾಂತಗಳು ಮತ್ತು ಶಾಸ್ತ್ರೋಕ್ತಗಳು ಮಾನವನ ಸ್ವಾತಂತ್ರ್ಯ ಸಹೋದರತೆಯ ಭಾವನೆಗಳನ್ನು ಮುಟಕುಗೊಳಿಸುವ ಮುಖ್ಯ ಸಾಧನಗಳಾಗಿವೆ ಎಂಬ ಅಂಶ ಉಪನಿಷತ್ತುಗಳಲ್ಲಿಯೇ ಉಲ್ಲೇಖವಾಗಿವೆ.

ಹಿಂದೂ ಧರ್ಮದಲ್ಲಿ ಒಬ್ಬ ವ್ಯಕ್ತಿ ನೈತಿಕತೆ ಮತ್ತು ಆದರ್ಶ ಬದುಕನ್ನು ಕಂಡುಕೊಳ್ಳುವ ಮಾರ್ಗಗಳಿವೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಪ್ರತಿಯೊಬ್ಬರೂ ಸಮಾನತೆ ಸ್ವಾತಂತ್ರ್ಯ ಮತ್ತು ಸಮೃದ್ಧ ಜೀವನಕ್ಕೆ ಸಹಾಯಕವಾಗುವ ಅಂಶಗಳತ್ತ ಗಮನಹರಿಸಬೇಕು. ಗತಿಸಿದ ಸಂಗತಿಗಳ ಪರಿಜ್ಞಾನ ಮತ್ತು ವರ್ತಮಾನದ ಜನರ ಬದುಕಿನ ಬೆಳವಣಿಗೆಯ ಕಡೆಗೆ ಗಮನಹರಿಸಬೇಕೆಂಬ ವಾದ ಮಂಡಿಸಿದ್ದಾರೆ.

ಬದಲಾವಣೆ ಜಗದ ನಿಯಮ, ನಿರಂತರವಾದ ಕ್ರಾಂತಿಕಾರಿ ಚಳುವಳಿಗಳಿಂದಾಗಿ ಪ್ರಾಚೀನ ಮೌಢ್ಯಾಚಣೆಗಳನ್ನು ನಿರ್ಲಕ್ಷಿಸಿ ವರ್ತಮಾನದಲ್ಲಿ ಗೌರವಯುತರಾಗಿ ಜೀವಿಸಲು ಸಾಧ್ಯವಾಗುವತ್ತ ಆಸಕ್ತರಾಗಬೇಕು. ಸನಾತನವಾದದ್ದು ವಸ್ತುನಿಷ್ಠ ಶ್ರೇಷ್ಠ ಎಂಬ ವಿಚಾರಗಳನ್ನು ವಸ್ತುನಿಷ್ಠ ನೆಲೆಯಲ್ಲಿ ಚಿಂತಿಸಬೇಕೆಂಬ ನಿಲುವು ತಾಳಿದ್ದಾರೆ. ಭಾರತದ ನಾಯಕರು ಮತ್ತು ಪತ್ರಿಕೆಗಳು ಹೋರಾಟದ ಮಾರ್ಗಗಳನ್ನು ಹಾಗೂ ತಳ ಸಮುದಾಯಗಳ ನಿರ್ಗತಿಕರ ವಿಮೋಚನೆಗಾಗಿ ತೊಡಗಿಸಿಕೊಂಡ ಪ್ರಕ್ರಿಯೆಗಳನ್ನು ತಿರಸ್ಕರಿಸಿರುವುದನ್ನು ಕಾಣಬಹುದು. ಕಾರಣ ಬಡವರ ಏಳಿಗೆಗೆ ಶ್ರೀಮಂತರು ಸವರ್ಣಿಯರಿಂದ ಸಹಾಯ ಬೇಡಬಾರದೆಂದು ಮತ್ತು ಸ್ವಪ್ರಯತ್ನ, ಸ್ವಾಭಿಮಾನ, ಸ್ವಾವಲಂಬನೆಯನ್ನು ಪ್ರತಿಪಾದಿಸಿರುವುದೇ ಪ್ರಧಾನ ಅಂಶಗಳಾಗಿವೆ. ಪ್ರತಿಯೊಬ್ಬ ಶೋಷಿತನು ಜಾಗೃತ ನಾಗಿ ಜಾತಿ ವ್ಯವಸ್ಥೆಯ ಬೇರುಗಳನ್ನು ಬುಡ ಸಮೇತ ಕಿತ್ತೋಗೆಯಲು ಪ್ರಮಾಣ ಬದ್ಧರಾಗಿರಬೇಕು. ಜಾತಿ ಎಂಬುದು ಸಾಂಕ್ರಮಿಕ ರೋಗವಾಗಿದ್ದ ಇಂದಿನ ದಿನಮಾನಗಳಲ್ಲಿ ಎಲ್ಲೆಡೆ ಹೆಮ್ಮರವಾಗಿ ಬೆಳೆಯುತ್ತಿದೆ. ಸ್ವರಾಜ್ಯ ಸ್ಥಾಪನೆಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿರುವ ವ್ಯಕ್ತಿಗಳಿಗಿಂತಲೂ ನಿಮ್ಮ ಪ್ರಯತ್ನ ಬಹು ಅಪಾಯಕಾರಿಯಾಗಿದೆ. ಸ್ವರಾಜ್ಯ ರಚನೆಗಾಗಿ ನಡೆಸುವ ಚಳುವಳಿಗೆ ರಾಷ್ಟ್ರದ ಬಹುಸಂಖ್ಯಾತರ ಬೆಂಬಲವಿದೆ. ಜಾತಿ ವ್ಯವಸ್ಥೆ ವಿರುದ್ಧ ಹೋರಾಡುವ ನೀವುಗಳು ರಾಷ್ಟ್ರದ ವಿರುದ್ಧ ಹೋರಾಡಬೇಕಾಗಿದೆ. ಹಿಂದೂ ಸಮಾಜ ಜಾತಿ ರಹಿತ ಸಮಾಜ ರಚನೆಯಾಗುವವರೆಗೂ ನಿಮ್ಮ ಪ್ರಯತ್ನ ನಿಲ್ಲಬಾರದು. ಸಮ ಸಮಾಜ ನಿರ್ಮಾಣ ಆಂತರಿಕವಾಗಿ ಸಾಧ್ಯವಾಗದಿದ್ದಲ್ಲಿ ಸ್ವರಾಜ್ಯ ಎಂಬುದು ಭಾರತೀಯರಿಗೆ ಗುಲಾಮಿ ವ್ಯವಸ್ಥೆಯೊಳಗಿನ ಮತ್ತೊಂದು ಪ್ರಯತ್ನಕ್ಕೆ ನಾಂದಿಯಾದಂತೆ ಎಂದು ಪ್ರತಿಪಾದಿಸಿದ್ದಾರೆ.

ಜಾತಿ ವ್ಯವಸ್ಥೆ ಎಂಬುದು ದೇಶದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಐಕ್ಯತೆ ಮತ್ತು ಮಾನವೀಯ ಮೌಲ್ಯ ಹಾಗೂ ನೈತಿಕ ವ್ಯವಸ್ಥೆಗೆ ಮಾರಕವಾಗಿದೆ. ಸ್ವಜನ ಪಕ್ಷಪಾತಕ್ಕೆ ಎಡೆ ಮಾಡಿಕೊಟ್ಟಿದೆ. ಭಾರತದ ಸುಧಾರಣಾ ವಾದಿಗಳಿಗೆ ರಾಜಕೀಯ ಹಾಗೂ ಕೌಟುಂಬಿಕ ಸುಧಾರಣೆಯೇ ಮುಖ್ಯ ಎಂಬುದನ್ನು ಒಪ್ಪದ ಅಂಬೇಡ್ಕರ್ ಅವರು ಹಿಂದೂ ಸಮಾಜ ಸತ್ವ ಭರಿತವಾಗಿ ಉಳಿಯಬೇಕಾದರೆ ಜಾತಿ ವಿನಾಶವಾಗಲೇಬೇಕು. ಜಾತಿ ವ್ಯವಸ್ಥೆಯ ಪರವಾದಿಗಳಿಗೆ ಪ್ರಶ್ನಿಸುತ್ತ ಪ್ರತಿಯೊಬ್ಬರು ಕೇವಲ ಬದುಕಿದ್ದೇವೆ ಎನ್ನುವುದಕ್ಕಿಂತ ಹೇಗೆ ಗೌರವಯುತವಾಗಿ ಬದುಕಿ ಜೀವನ ನಡೆಸುತ್ತಿದ್ದೇವೆ ಎಂಬುದು ಬಹಳ ಮುಖ್ಯ ಎಂದು ತಿಳಿಸುತ್ತಾರೆ. ಜಾತಿ ಪದ್ಧತಿಯ ವಿವಿಧ ಮುಖಗಳನ್ನು ಮತ್ತು ಸವಾಲುಗಳು ಹಾಗೂ ಅದರ ಕೆಡಕುಗಳನ್ನು ಪರಿಚಯಿಸಿದ ಅಂಬೇಡ್ಕರ್‌ರವರು ಜಾತಿ ವ್ಯವಸ್ಥೆಯನ್ನು ಸಲಹೆ ಮಾಡಿ ಪ್ರೋತ್ಸಾಹಿಸುತ್ತಿರುವ ಹಿಂದೂ ಶಾಸ್ತ್ರ ಸ್ಮೃತಿ, ಸ್ತೋತ್ರಗಳನ್ನು ನಾಶ ಮಾಡಿದರೆ ಮಾತ್ರ ನೆಮ್ಮದಿಯ ಗೌರವ ಹೊಂದಿದ ಬದುಕು ಸಾಧ್ಯ ಎಂಬ ಚಿಂತನೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- Ambedkar, B. (2014). *Annihilation of caste: The Annotated Critical Edition*. Verso Books.
- Ambedkar, B. (2014b). *The untouchables*. Ssoft Group.

- Ambedkar, B. R. (2015). *Castes in India: their mechanism, genesis and development*. http://ci.nii.ac.jp/ncid/BB04881089
- Ambedkar, B. R. (2018). *Riddles in Hinduism*. Independently Published.
- Ambedkar, B. R. (2024). *Who were the Shudras?: How They Came to be the Fourth Varna in the Indo-Aryan Society*.
- Ambedkar, B. R., & Rodrigues, V. (2004). *The Essential Writings of B. R. Ambedkar*. http://ci.nii.ac.jp/ncid/BA74251190
- Deliège, R. (1999). *The Untouchables of India*. Bloomsbury Publishing PLC.
- Lokhande, G. S. (1982). *Bhimrao Ramji Ambedkar, A Study in Social Democracy*.